Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 4 | ಬುಧವಾರ 4—9—46 | ಬಿಡಿ ಪ್ರತಿ 3 ಪೈ.

ವೀರ ಸವಾರ್ಕರರ ಮುತ್ತಿನಂಥ ಮಾತುಗಳು

— 1 —

ಜೈಲರ್ ಬಾರಿ — ಮಾರ್ಸಿಲಿನ ಹತ್ತಿರ ಹಿಡಿಹೋದವನು ನೀನೇನೇ ?

ಸವಾರ್ಕರ್— ಹೌದು. ಏನು ?

ಬಾರಿ— ಇತರರಂತೆ ಅಲ್ಲದೆ, ನಿನ್ನ ಯೌವನ, ನಿನ್ನ ಕೀರ್ತಿ, ನಿನ್ನ ಪ್ರತಿಷ್ಠೆ ನಿನ್ನ ಅರಿವು, ಇವುಗಳಿಗೆ ತಕ್ಕಂತೆ ನಡೆದುಕೋ.

— 2 —

ಜೈಲು ಅಧಿಕಾರಿ— ದಯಾಮಯರಾದ ಬ್ರಿಟಿಷು ಸರಕಾರದವರು 1960 ರಲ್ಲಿಯಾದರೂ ನಿನ್ನನ್ನು ಬಿಡುಗಡೆ ಮಾಡುವರು, ನಂಬಿಕೊಂಡಿರು.

ಸವಾರ್ಕರ್— (ಕೂಡಲೆ) ಹೌದು ಆದರೆ ಭಾರತದೇಶದಲ್ಲಿ ಬ್ರಿಟಿಷು ಸರಕಾರವು ಇನ್ನೂ 50 ವರ್ಷಗಳ ಕಾಲ ಇರಬಲ್ಲದೇ !

— 3 —

ಫಜಲಲ್ ಹಕ್ (ಹಿಂದಿನ ಬಂಗಾಳಾದ ಪ್ರಧಾನಿ)— ಮುಸಲ್ಮಾನರು ಹುಲಿಗಳು, ಸಿಂಹಗಳು, ಅವರು ಹಿಂದೂಗಳನ್ನು ಹಿಂಸಿಸಬಿಲ್ಲರು.

ಸವಾರ್ಕರ್— ಹಿಂದೂಗಳು ಮನುಷ್ಯರು. ಅವರು ಹುಲಿಗಳನ್ನೂ ಸಿಂಹಗಳನ್ನೂ ಹಿಡಯಬಲ್ಲರು, ಬೋನಿನೊಳಕ್ಕೆ ಕೊರಡಾದಿಂದ ಸೇರಿಸಬಲ್ಲರು

— 4 —

ಫಜಲಲ್ ಹಕ್ — (ಮಲಬಾರಿನಲ್ಲಿ ಉಪನ್ಯಾಸ ಮಾಡುತ್ತಾ) ಮಲಬಾರು ಅರೇಬಿಯಾದ ಒಂದು ಭಾಗವೆಂದು ಹೇಳಿದರು.

ಸವಾರ್ಕರ್— ಹಾಗಾದರೆ ಜಾಗ್ರತೆಯಾಗಿ ಅರೇಬಿಯಾವನ್ನು ಭಾರತದೇಶದೊಂದಿಗೆ ಸೇರಿಸಿಕೊಳ್ಳುತ್ತೇನೆ.

ಲೀಗಿನ ಅಧ್ಯಕ್ಷರ ಮನೆಯ ಮೇಲೆ ಕಾಳ ಧ್ವಜ ಇಲ್ಲ

ಅಖಿಲ ಭಾರತ ಮುಸ್ಲಿಂ ಲೀಗ್ ಅಧ್ಯಕ್ಷ ಮಿ॥ ಜಿನ್ನಾರವರು ಮುಂಬೈನಲ್ಲಿರುವ ತಮ್ಮ ಭವನದ ಮೇಲೆ ತಾತ್ಕಾಲಿಕ ಸರ್ಕಾರದ ಪ್ರತಿಭಟನಾರ್ಥವಾಗಿ ಕಾಳಿ ಧ್ವಜವನ್ನು ಹಾರಾಡಿಸಲಿಲ್ಲ !

ಭಾರತಕ್ಕೆ ಸರಿಸಮಾನ ಸ್ಥಾನ

'ಹಿಂದೂಸ್ಥಾನಕ್ಕೆ ಪ್ರಪಂಚದಲ್ಲಿ ಸರಿಸಮಾನ ಸ್ಥಾನ ದೊರೆಯಬೇಕು ಅದನ್ನು ಆರ್ಜಿಸಲು ಹಿಂದೂಸ್ಥಾನ ಸತತವಾಗಿ ಹೋರಾಡುವುದು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ಅಗೌರವವಿದೆ. ಪ್ರಪಂಚ ಸಂಸ್ಥೆಯಲ್ಲಿ ಈ ವಿಷಯವನ್ನು ಇಟ್ಟು ಭಾರತ ಸರ್ಕಾರ ಪ್ರಯತ್ನ ಪಡುವುದು' ಎಂಬುದಾಗಿ ಪಂ॥ ನೆಹರು ದಕ್ಷಿಣ ಆಫ್ರಿಕಾ ಭಾರತೀಯರಿಗೆ ಸಂದೇಶವಿತ್ತಿದ್ದಾರೆ [ನವದೆಹಲಿ]

ಬೊಂಬಾಯಿ ಗಲಭೆ

ಬೊಂಬಾಯಿ, ಸೆ 3 — ದೊಂಬಿ ಪ್ರದೇಶ ಪ್ರಬಲ ರಕ್ಷಣಾ ವ್ಯವಸ್ಥೆಯಿಂದ ಬೇರ್ಪಟ್ಟಿದೆ. ಗೋಣೀಚೀಲದ ಹತ್ತು ಅಂಗಡಿಗಳು ಭಸ್ಮವಾದವು ನಿನ್ನೆ ಗುಂಡು ಹಾರಿಸಲಾಯಿತು. ಎಪ್ಪತ್ತು ಮರಣ ಸಂಭವಿಸಿದೆ.

ಜಯಕರಿಗೆ ಅವಿರೋಧತೆ

ಪುಣೆ ಸೆ 3 — ರಾಜ್ಯಾಂಗ ಘಟನಾ ಸಮಿತಿಗೆ ಡಾ॥ ಜಯಕರರು ಅವಿರೋಧವಾಗಿ ಆಯ್ಕೆ ಆದರು.

ಲೀಗಿಗೆ ಬೆಂಬಲ

ಕಲ್ಕತ್ತಾ ಸೆ 2 — ಬಂಗಾಳದ ನಿವೃತ್ತ ಪ್ರಧಾನಿ ಫಜಲಲ್ಲು ಹಕ್ಕರು ಲೀಗಿಗೆ ಬೆಂಬಲ ಕೊಡುವರಂತ.

ಪ್ರಧಾನಿ ನೆಹರು ಸೇನಾಶಾಖೆಗೆ ಭೇಟಿಯಿತ್ತರು

ಹಿಂಸಾ ಕಾರ್ಯದಿಂದ ವಿಜಯ ಲಭಿಸಲಾರದು

ಕಾರಾಂತರ ನುಡಿ

ದಾವಣಗೆರೆ, ಸೆ 1 — ಕರ್ನಾಟಕ ನಾಡೆಲ್ಲವೂ ಐಕ್ಯವಾಗಬೇಕೆಂದು ಕಾರಾಂತರು ವಿಕೇಂದ್ರೀಕರಣ ಸಮ್ಮೇಳನದ ಭಾಷಣದಲ್ಲಿ ತಿಳಿಸಿದರು.

ಬೆಂಗಳೂರು ಸುದ್ದಿ

ಬೆಂಗಳೂರು ಸೆ 3 — ಕಳೆದ ರಾತ್ರಿ ಜಟಕ ಗಾಡಿ ಅವಿವೇಕವಾಗಿ ಓಡಿತು. ಜನರು ಭೀತಿಗೊಂಡರು ಪೋಲೀಸರು ಸಶಸ್ತ್ರರಾಗಿ ಜನಗಳಲ್ಲಿದ ಭೀತಿಯನ್ನು ತೊಡೆದರು ತಾತ್ಕಾ ವಿಜ್ಞಾನ ಶಾಲೆಯು-ಕೊಲೆ ಘಟನೆ ಹಿಂಗೂ ಮುಸ್ಲಿಂ ಜಗಳದ್ದಲ್ಲವಂತೆ.

ಭಾರತ ಪದ್ಧತಿ

ನವದೆಹಲಿ, ಸೆ 2 — ಮಂತ್ರಿಗಳ ಹೆಸರಿನ ಹಿಂಭಾಗದಲ್ಲಿ ಅನರೆಬಲ'ಗೆ ಬದಲಾಗಿ ಶ್ರೀ ಎಂದು ಸೇರಿಸಲಾಗಿದೆ.

ನೆಹರು ಉಪಾಧ್ಯಕ್ಷರು

ನವದೆಹಲಿ ಸೆ 3 — ಪಂ॥ ನೆಹರು ವೈಸ್ರಾಯಿ ಕಾರ್ಯಕಾರಿ ಮಂಡಲದ ಉಪಾಧ್ಯಕ್ಷರಾದರು

ಬಿರುದು ಬಾವಲಿಗಳ ಬಂದು

ನವದೆಹಲಿ ಸೆ 2 — ಭಾರತದಲ್ಲಿ ಬಿರುದು ದಾನಾ ನಿಲ್ಲಿಸಲಾಗುವುದು ಹಾಗೆ ಬಿರುದು ಕೊಡುವುದು ಅವಮಾನ ಎಂದು ನೆಹರು ತಿಳಿಸಿದರು

ಪ್ರಾರ್ಥನಾ ಸಭೆ

ನವದೆಹಲಿ ಸೆ 2 — ಭಾರತವು ಪೂರ್ಣ ಸ್ವರಾಜ್ಯದ ಬಾಗಿಲು ತೆರೆಯಿತೆಂದು ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ತಿಳಿಸಿದರು

ಲಂಡನ್ ಸೆ. 2 — ಲಂಡನ್ನಿನಲ್ಲಿ ನಡೆಯುತ್ತಿರುವ ಪ್ಯಾಲಿಸ್ಟೈನ್ ಮಾತುಕತೆಗಳಲ್ಲಿ ಎಲ್ಲಾ ಅರಬ್ ಪ್ರತಿನಿಧಿಗಳೂ ಭಾಗವಹಿಸುವರು

ಬೆನಾರಸ್ ಸೆ. 2 — ಕಾಶೀ ವಿಶ್ವವಿದ್ಯಾಲಯದ 50 ಹಳ್ಳಿಗಳು ಗಂಗಾ ಪ್ರವಾಹದಿಂದ ಸುತ್ತಲ್ಪಟ್ಟ ತೊಂದರೆಗೀಡಾಗಿರುವರು. ಅವರನ್ನು ಅಲ್ಲಿಂದ ಸಾಗಿಸಲು ಪ್ರಯತ್ನ ನಡೆಯುತ್ತಿದೆ

ನವದೆಹಲಿ ಸೆ. 3 — ಈ ದಿನ ಪಂ॥ ನೆಹರು ಪತ್ರಿಕಾ ಪ್ರತಿನಿಧಿಗಳೊಡನೆ ಹಿಂದೂಸ್ಥಾನಿಯಲ್ಲಿ ಪ್ರಾತಃನಾಡಿದರು.

ಹಿಂಸಾ ಚಳುವಳಿಂದ ವಿಜಯ ದೊರೆಯುವುದಿಲ್ಲ

ಲಾಹೋರು ಸೆ 2 — ಹಿಂಸಾ ಕಾರ್ಯದಿಂದೊಡಗೂಡಿದ ಯಾವ ಚಳವಳವೂ ಭಾರತದಲ್ಲಿ ವಿಜಯವಾಗುವುದಿಲ್ಲವೆಂದು 'ಅಹರಾರ' ಮುಖಂಡರಾದ ಷಾಬುರಾರಿಯವರು ಒಂದು ಬಹಿರಂಗ ಸಭೆಯಲ್ಲಿ ಕಲ್ಕತ್ತಾ ಗಲಭೆ ಸಂದರ್ಭದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ಯುದ್ಧ ಮಂತ್ರಿಗೆ ಅಭಿನಂದನೆ

ನವದೆಹಲಿ ಸೆ 3 — ಡೆಪ್ಟಿ ಸೇನಾಪತಿಗಳು ಯುದ್ಧ ಮಂತ್ರಿ ಸರದಾರ ಬಲದೇವಸಿಂಗರನ್ನು ಅಭಿನಂದಿಸಿ ಭಾರತ ಸಶಸ್ತ್ರ ಸೈನಾ ಪಡೆಗಳವರ ಸ್ವಾಗತ ನೀಡಿರುವರು,

ಚೋರಿ ಇರಿತ

ಅಲಹಾಬಾದ್ ಸೆ. 2 — ಈ ದಿನ ಇಬ್ಬರು ಚೋರಿಯಿಂದ ಇರಿಯಲ್ಪಟ್ಟು ಸತ್ತರು. ಈ ಸಂದರ್ಭದಲ್ಲ ಡಿ॥ ಮ್ಯಾಜಿಸ್ಟ್ರೇಟರು 10 ಸಾವಿರ ರೂ. ಪುಂಡು ಕಂದಾಯ ವಿಧಿಸಿರುವರು. 50 ಮಂದಿ ದಸ್ತಗಿರಿಮಾಡಲ್ಪಟ್ಟಿದ್ದಾರೆ.

ಜಿಲ್ಲಾ ಬೋರ್ಡು ಮೀಟಿಂಗು

ಮೈಸೂರು ಸೆ. 4 — ಈ ದಿವಸ ಮಧ್ಯಾಹ್ನ 1 ಗಂಟೆಗೆ ಜಿಲ್ಲಾ ಸಮಿತಿ ಅಧಿವೇಶನ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸೇರಿತ್ತು. ಆನಾರೋಗ್ಯ ನಿಮಿತ್ತ ಅಧ್ಯಕ್ಷರಾದ ಶ್ರೀ ಕೆ. ಸಿ. ಸುಬ್ಬಣ್ಣನವರು ಸಭೆಗೆ ಬಂದಿರಲಿಲ್ಲ.

ನಿವೃತ್ತ ದಿವಾನರಾದ ಪ್ರಥಮ ಶಿರೋಮಣಿ ಪೂಧವರಾಯರನ್ನು ಮತ್ತು ನೂತನ ದಿವಾನರಾದ ಸರ್ ಮೊದಲಿಯಾರರನ್ನು ಅಭಿನಂದಿಸುವ ನಿರ್ಣಯವಾಯಿತು.

ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಿದ್ದಕ್ಕಾಗಿ ಪಂ॥ ನೆಹರುರವರನ್ನು ಅಭಿನಂದಿಸುವ ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು.

ಜಿಲ್ಲಾ ಸಮಿತಿ ಸದಸ್ಯರಾದ ಶ್ರೀ ಕುದೇರು ವೀರಣ್ಣನವರಿಗೆ ಸಾರ್ವಜನಿಕ ಪದಕ ಲಭಿಸಿದ್ದಕ್ಕಾಗಿ ಪ್ರಭುಗಳನ್ನು ಅಭಿನಂದಿಸುವ ನಿರ್ಣಯವಾಯಿತು.

ಕಲ್ಕತ್ತಾದಲ್ಲಿ ಪಾಕೀಸ್ತಾನ

ಕಲಕತ್ತಾದಲ್ಲಿ ಸಾವಿರಾರು ಹಿಂದೂ ಜನರು ಮುಸಲ್ಮಾನ ಭಾಗದಿಂದ ಹೊರಟು ಹೋಗಿರುವರು. ಹಾಗೂ ಸಾವಿರಾರು ಮುಸಲ್ಮಾನರು ಹಿಂದೆಗಳ ವಸತಿಯಿಂದ ಹೊರಟು ಹೋಗಿರುವರು.

ಈ ಪ್ರಕಾರ ಪಾಕೀಸ್ತಾನ ಮತ್ತು ಹಿಂದೂಸ್ಥಾನಗಳು ತಾವಾಗಿಯೇ ನಿರ್ಮಿತವಾಗಿರುವುವು.

ಹಿಂದುಗಳು ಕಲಿಕೆತ್ತೆಯ ದಕ್ಷಿಣ ಹುತ್ತು ವಾಯುವ್ಯ ಭಾಗಗಳಲ್ಲಿ ಹಾಗು ಮುಸಲ್ಮಾನರು ಪೂರ್ವ ಮತ್ತು ಈಶಾನ್ಯ ಭಾಗಗಳಲ್ಲಿ ನೆಲಸಿರುವರು.

ಇದರಿಂದ ಜನತೆಯ ಮೇಲೆ ಪರಿಣಾಮವಾಗದೆ ಇರಲಾರದು. ಕಾರಣ ಮುಸಲ್ಮಾನ ಕಟುಕರಿಗೆ ಹಿಂದೂ ವಸತಿಯಿಂದ ದನಸಿಗಲಾರವು. ಮತ್ತು ಹಿಂಗುಗಳು ಮುಸಲ್ಮಾನ ಭಾಗದಲ್ಲಿ ಕಾಯಿಪಲ್ಯ ಮಾರಲು ಹೋಗಲಾರರು. ಇದರಿಂದ ವ್ಯಾಪಾರ ಉದ್ಯೋಗಗಳಿಗೆ

ಹ್ಯಾಬರ್ಗಿನಲ್ಲಿ ದುರವಸ್ಥೆ

ಹೇಂಬರ್ಗ್ : — ಜರ್ಮನಿಯ ಮುಖ್ಯ ಬಂದರಾದ ಹೇಂಬರ್ಗ್ ಈಗ ಉಪವಾಸ ರೋಗಾದಿಗಳ ತವರು ಮನೆಯಾಗಿದೆ ಬ್ರಿಟೀಷ್ ಸೈನ್ಯದ ಅಧಿಕಾರಕ್ಕೊಳಗಾದ ಹೇಂಬರ್ಗಿನಲ್ಲಿ ಇಳಿಸಲಾಗುವ ಆಹಾರ ಸಾಧನಗಳು ಸೈನ್ಯಾಧಿಕೃತರ ಅವಶ್ಯಕತೆಗಳಿಗೇನೇ ಸಾಕಾಗುವುದಿಲ್ಲ. ಇಲ್ಲಿಯ ಹದಿನಾರು ಸಾವಿರ ಜರ್ಮನರು ಜ್ವರಪೀಡಿತರಾಗಿರುವರು. ಆರು ಸಾವಿರ ಜರ್ಮನರು ಕ್ಷಯರೋಗಿಗಳಾಗಿದ್ದಾರೆ. ಶಿಶುಗಳು ಗ್ರಹಿಣಿ ರೋಗಗಳಿಂದ ಕಷ್ಟ ನಡುತ್ತಿವೆ. ಈ ರೋಗಗಳಿಗೆ ಚಿಕಿತ್ಸೆ ವಡೆಯುತ್ತಿದೆ. ಹೇಗಾದರೂ ರೇಶನ್ ಹೆಚ್ಚಿಸಬೇಕೆಂದು ಬ್ರಿಟಿಷ್ ಅಧಿಕಾರಿಗಳು ಅಪೇಕ್ಷಪಡುತ್ತಿದ್ದಾರೆ.

ಹಾನಿಯಾಗದಿರದೆಂದು ಹೇಳಲಾಗಿದೆ. (ಸಂ)

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

ಷೇಕ್ಸ್‌ಪೀಯರ್ ನಾಟಕ 'ಹೆನ್ರಿ 5' ಚಲಚಿತ್ರದಲ್ಲಿ
ಲಾರೆನ್ಸ್ ಆಲಿವರ್ ಹೆನ್ರಿಯ ಪಾತ್ರದಲ್ಲಿ

At Ranjit

From 29-8-46

Anmol Ghadi

ನೂರ್‌ಜಹಾನ್ — ಸುರೇಂದ್ರ
ಜಹರ್ ರಾಜಾ — ಸುರಿಯ
ಪಾತ್ರವಹಿಸಿರುವ

ಅನ್ಮೋಲ್ ಘಡಿ

(ಅಮೂಲ್ಯ ಗಡಿಯಾರ)

At Opera ⁼⁼ 2nd Glorious Week

B I S V I S A D I

* ನಾರ್ಗಿಸ್ * ಮೋತಿಲಾಲ್ * ನೂರ್‌ಜಹಾನ್ ನಟಿಸಿರುವ

ಬಿ ೀ ಸ್ವಿ ನ ದಿ

(ಹಿಂದಿ) ಪ್ರತಿದಿನ 3 ಆಟಗಳು

ಸುಖ ಆರೋಗ್ಯ ಆನಂದದಾಯಕ

ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು. ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮುಬರಾಸು.

ಚಳಿ ಜ್ವರಕ್ಕೆ

ಉಚಿತವಾಗಿ ಔಷಧವನ್ನು

ಕೊಡಲ್ಪಡುವುದು.

ಆಶೋಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರ

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College
Kotgarh, Simla